ಪುರಾಣವನ್ನೆಲ್ಲಾ ಹೇಳುತ್ತಾಳೆ ಎಂಬುದರಲ್ಲಿ ನನಗೆ ಯಾವುದೇ ಸಂಶಯವಿರಲಿಲ್ಲ.

ನಾನು ಮತ್ತೆ ಎಂಟು ಸುತ್ತು ಓಡಿ, ಬಂದು ಬೆಂಚಿನ ಮೇಲೆ ಮಾಲಾಳ ಪಕ್ಕ ಕುಳಿತೆ. ಅವಳ ಮೊಬೈಲ್ ಸಂಭಾಷಣೆ ಇನ್ನೂ ಮುಗಿದಿರಲಿಲ್ಲ.

''ಆಗಲೇ ವೇಳೆ 7.45. ಪುಟ್ಟಿ ಎದ್ದಿರ್ತಾಳೇನೋ? ಮನೆಗೆ ಹೋಗಿ ನಿನ್ನ ಪುರಾಣವನ್ನು ಮುಂದುವರೆಸುವೆಯಂತೆ, ಬಾ...'' ಆಕೆಗೆ ಹೇಳಿದೆ.

ಪಾರ್ಕಿನಿಂದ ಹೊರಬಂದು, ಸರವನ್ನು ಹುಡುಕಿಕೊಂಡು ಯಾರಾದರೂ ಬಂದಿರುವರೇನೋ ಎಂದು ಸುತ್ತಲೂ ಮತ್ತೊಮ್ಮೆ ನೋಡಿ, ಯಾರೂ ಇಲ್ಲವೆಂದು ಖಾತ್ರಿಯಾದ ನಂತರ, ಮನೆಗೆ ನಡೆದೆವು.

ಮನೆ ತಲುಪಿದ ನಂತರ, ನಾನು ಸ್ನಾನ ಮುಗಿಸಿ ಹೊರಬರುವುದನ್ನೇ ಎದುರು ನೋಡುತ್ತಿದ್ದ ಮಾಲಾ, ಚಹಾ ಕಪ್ಪನ್ನು ಕೈಗಿಡುತ್ತ ಮತ್ತೆ ಕೇಳಿದಳು, ''ಸರವನ್ನು ಹುಡುಕುತ್ತ ಯಾರೂ ಬರಲಿಲ್ಲ, ಅಲ್ವಾ? ಈಗ ಏನು ಮಾಡ್ಬೇಕು ಅಂತ ಅಂದ್ಕೊಂಡಿದೀರಾ?''

''ಇನ್ನೂ ಆ ಬಗ್ಗೆ ಯೋಚನೆ ಮಾಡಿಲ್ಲ. ನಿನ್ನಮ್ಮನ ಜೊತೆ ಮಾತಾಡ್ತಿದ್ದೆಯಲ್ಲ, ಏನು ಹೇಳಿದ್ರು ಅವ್ರು?''

''ಬೇರೆಯವರ ಚಿನ್ನ ಸಿಗೋದು ಒಳ್ಳೆಯದಲ್ವಂತೆ. ಅದು ಯಾರ್ದು ಅಂತ ಗುರ್ತು ಸಿಗದೇ ಹೋದ್ರೆ, ಹೇಗಿದ್ರೂ ಇಂದು ಹನುಮ ಜಯಂತಿ, ಮನೆ ಹತ್ತಿರ ಇರೋ ಆಂಜನೇಯನ ದೇವಸ್ಥಾನಕ್ಕೆ ಅದನ್ನ ಕೊಟ್ಟುಬಿಡಿ ಅಂತಾ ಹೇಳಿದ್ಲು ಅಮ್ಮ...'' ತನ್ನಮ್ಮನ ಜೊತೆ ನಡೆದ ಮಾತುಕತೆಯ ಸಾರಾಂಶ ಹೇಳಿದಳು.

''ನೀನು ಪುಟ್ಟೀನ ಎಬ್ಬಿಸಿ, ಸ್ನಾನಕ್ಕೆ ಕಳಿಸಿ, ತಿಂಡಿ ರೆಡಿ ಮಾಡು. ಅಷ್ಟರಲ್ಲಿ ನಾನು ಏನಾದ್ರೂ ಯೋಚನೆ ಮಾಡಿರ್ತೀನಿ...'' ಎಂದು ಹೇಳಿ ದಿನಪತ್ರಿಕೆಯನ್ನು ಓದುತ್ತ ಕುಳಿತೆ.

ಮಾಲಾ ತಿಂಡಿ ತಿನ್ನಲು ಕರೆಯುವ ಹೊತ್ತಿಗೆ, ಐದು ಪ್ರತಿ ಪ್ರಿಂಟೌಟ್ ಕೈಲಿ ಹಿಡಿದು ಊಟದ ಟೇಬಲ್ಲಿಗೆ ಹೋದೆ.

''ಏನ್ರೀ ಅದು? ಏನೋ ಪ್ರಿಂಟೌಟ್ ಹಿಡಿದಿದ್ದೀರಾ ಕೈಯಲ್ಲಿ!!'' ಕೇಳಿದಳು. ಅವಳ ಕೈಗೆ ಒಂದು ಪ್ರತಿ ಕೊಟ್ಟೆ.

''ಇಂದು ಬೆಳಿಗ್ಗೆ, ಈ ಜಾಗದಲ್ಲಿ ಬೆಲೆಬಾಳುವ ವಸ್ತುವೊಂದು ಸಿಕ್ಕಿದೆ. ವಸ್ತುವಿನ ಮಾಲೀಕರು, ವಸ್ತುವಿನ ಪೂರ್ಣ ವಿವರಗಳನ್ನು ಕೆಳಕಂಡ ಮೊಬೈಲ್ ನಂಬರಿಗೆ ಕರೆ ಮಾಡಿ ತಿಳಿಸಿ, ವಸ್ತುವನ್ನು ತೆಗೆದುಕೊಳ್ಳಬಹುದು.'' ಇದಿಷ್ಟು ನಾನು ಟೈಪ್ ಮಾಡಿ ತಗೆದ ಆ ಪ್ರಿಂಟೌಟಿನಲ್ಲಿದ್ದ ವಿಷಯ.

''ಅಲ್ಲಾ ರೀ... ಎಷ್ಟು ಜನ, ಏನೆಲ್ಲ ಕಳ್ಕೊಂಡಿರ್ತಾರೆ... ಎಷ್ಟು ಜನರ ಜೊತೆ, ಎಷ್ಟು ದಿನ ಫೋನಲ್ಲಿ ಮಾತಾಡ್ತೀರ? ನನಗೇನೋ ಇದು ಮೂರ್ಖತನ ಎನಿಸುತ್ತೆ!'' ಮಾಲಾ ತನ್ನ ಆತಂಕ ವ್ಯಕ್ತಪಡಿಸಿದಳು.

''ಸಂಜೆಯವರೆಗೂ ನೋಡೋಣ... ಯಾರಾದರೂ ಫೋನ್ ಮಾಡಿದವರು ಸರಿಯಾದ ವಿವರ ಕೊಟ್ರೆ, ಅವರನ್ನ ಬರಹೇಳಿ, ಕೂಲಂಕಷವಾಗಿ ವಿಚಾರಿಸಿ, ಅವರಿಗೆ ಸರವನ್ನು ಕೊಡೋಣ. ಸಂಜೆಯಾದ್ರೂ ಯಾರೂ ಬರಲಿಲ್ಲ ಅಂದ್ರೆ, ನಿಮ್ಮಮ್ಮ ಹೇಳ್ದಂಗೆ ಆಂಜನೇಯನ ದೇವಸ್ಥಾನದಲ್ಲಿ ಹುಂಡಿಗೆ ಹಾಕಿಬಿಡೋಣ. ಅದಕ್ಕಾಗಿಯೇ, ಮೊಬೈಲ್ ನಂಬರ್ ಸಹ ನಿನ್ನ ತಮ್ಮ ಶಶಿಯದ್ದು ಕೊಟ್ಟಿದ್ದೀನಿ. ಹೋದ ತಿಂಗಳು ಅವನು ಜರ್ಮನಿಗೆ ಹೋಗುವ ಮೊದಲು